

بسم اللهِ الرّحمٰن الرّحيم

# ಇಸ್ತಿಗ್‌ಫಾರ್ ಮತ್ತು ತೌಬ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **25-08-2023** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ. بِسْمِ اللّٰهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಅಲ್ಲಾಹನು ತನ್ನ ದಾಸರ ಕ್ಷಮೆಯಾಚನೆ (ಇಸ್ತಿಗ್‌ಫಾರ್) ಮತ್ತು ಪಶ್ಚಾತ್ತಾಪವನ್ನು (ತೌಬ) ಸ್ವೀಕಾರ ಮಾಡುವವನಾಗಿದ್ದಾನೆ. ಆದರೆ ಅದಕ್ಕೆ ಇರುವ ನಿಬಂಧನೆ ಏನೆಂದರೆ, ಅದು ನಿಜವಾದ ತೌಬ ಆಗಿರಬೇಕು. ಕೇವಲ ಬಾಯಿಮಾತಾಗಿರಬಾರದು. ನಿಜವಾಗಿಯೂ ತೌಬ ಮಾಡುವವರಿಗೆ ಅಲ್ಲಾಹನು ಸಂಪತ್ತು ಮತ್ತು ಮಕ್ಕಳನ್ನು ದಯಪಾಲಿಸುವನು ಎಂದು ಪವಿತ್ರ ಖುರ್‌ಆನಿನ ವಿವಿಧ ಎಡೆಗಳಲ್ಲಿ ಪ್ರಸ್ತಾಪಿಸಲಾಗಿದೆ. ಇದು ದೈವಿಕ ಶಿಕ್ಷೆಯಿಂದ ರಕ್ಷಣೆ ಪಡೆಯಲು ಇರುವ ಒಂದು ಮಾರ್ಗ ಸಹ ಆಗಿದೆ.

ಇಸ್ತಿಗ್‌ಫಾರ್ ಮಾಡುವವನು ಅಲ್ಲಾಹನ ಕಾರುಣ್ಯವನ್ನು ಸೆಳೆಯುವವನಾಗುತ್ತಾನೆ. ಇಸ್ತಿಗ್‌ಫಾರ್ ಮಾಡುವವರಿಗೆ ಸುವಾರ್ತೆ ನೀಡುತ್ತಾ ಅಲ್ಲಾಹನು ಒಂದೆಡೆ ಹೇಳುತ್ತಾನೆ: **ಲವಜದುಲ್ಲಾಹ ತವ್ವಾಬರ್ರಹೀಮಾ.** ಎಂದರೆ, ಅತಿ ಹೆಚ್ಚು ಕ್ಷಮಿಸುವವನೂ ಕಾರುಣ್ಯನಿಧಿಯೂ ಆಗಿ ಅಲ್ಲಾಹನನ್ನು ಅವರು ಖಂಡಿತವಾಗಿಯೂ ಕಾಣುವರು. ಆದರೆ ಯಥಾರ್ಥ ಇಸ್ತಿಗ್‌ಫಾರ್ ಮತ್ತು ನಿಜವಾದ ತೌಬ ಆಗಿರಬೇಕು ಎಂಬುದೇ ಅದರ ಶರತ್ತು.

ಹಝ್ರತ್ ಪೈಗಂಬರ್[ಸ] ಹೇಳಿದ್ದಾಗಿ ಹಝ್ರತ್ ಅನಸ್[ರ] ಹೀಗೆ ವರದಿ ಮಾಡುತ್ತಾರೆ: ಪಾಪದಿಂದ ನಿಜವಾದ ಪಶ್ಚಾತ್ತಾಪ ಮಾಡುವವನು ಯಾವುದೇ ಪಾಪವನ್ನು ಮಾಡದೇ ಇರುವವನ ಹಾಗೆಯೇ ಆಗಿರುವನು. ಅಲ್ಲಾಹನು ಯಾವನಾದರೂ ವ್ಯಕ್ತಿಯನ್ನು ಪ್ರೀತಿಸುವಾಗ ಪಾಪವು ಅವನಿಗೆ ಯಾವುದೇ ನಷ್ಟವನ್ನು ಉಂಟುಮಾಡಲು ಸಾಧ್ಯವಲ್ಲ. ಎಂದರೆ ಪಾಪದ ಪ್ರೇರಣೆಗಳಿಗೆ ಆತನನ್ನು ಪಾಪದ ಕಡೆಗೆ ಸೆಳೆಯಲು ಸಾಧ್ಯವಲ್ಲ ಮತ್ತು ಕೆಡುಕಿನ ದುಷ್ಪರಿಣಾಮಗಳಿಂದ ಅಲ್ಲಾಹನು ಆತನನ್ನು ಸಂರಕ್ಷಿಸುವನು. ಮಾಡಿದ ಪಾಪದ ಕುರಿತು ನಾಚಿಕೆಪಡುವುದು ಮತ್ತು ಲಜ್ಜೆ ಉಂಟಾಗುವುದು ತೌಬದ ಲಕ್ಷಣವಾಗಿದೆ ಎಂದು ಹಝ್ರತ್ ಪೈಗಂಬರ್[ಸ] ಹೇಳಿರುವರು. ಒಟ್ಟಿನಲ್ಲಿ ಯಥಾರ್ಥವಾದ ತೌಬ ಮಾಡುವವನು ಪಾಪಗಳಿಂದ ವಿಮುಕ್ತನಾಗುತ್ತಾನೆ ಮತ್ತು ಆತನಿಗೆ ಅಲ್ಲಾಹನ ಪ್ರೀತಿಯೂ ಲಭಿಸುತ್ತದೆ ಹಾಗೂ ಪದೇ ಪದೇ ಅಲ್ಲಾಹನ ಕಾರುಣ್ಯದಿಂದ ಪಾಲು ಪಡೆಯುತ್ತಾನೆ.

ನಿಜವಾದ ತೌಬದ ಕುರಿತು ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಕೆಟ್ಟ ಭಾವನೆಗಳನ್ನು ಹಾಗೂ ಕೆಟ್ಟ ಕಲ್ಪನೆಗಳನ್ನು ಉಪೇಕ್ಷಿಸಬೇಕು ಎಂಬುದಾಗಿದೆ ಮೊದಲ ನಿಬಂಧನೆ. ಎರಡನೇ ನಿಬಂಧನೆ, ನಿಜವಾದ ಲಜ್ಜೆ ಮತ್ತು ನಾಚಿಕೆ ಉಂಟಾಗಬೇಕು. ಮೂರನೇ ನಿಬಂಧನೆ, ಆ ಕೆಡುಕುಗಳ ಸಮೀಪಕ್ಕೆ ಹೋಗಲಾರೆನು ಎಂದು ದೃಢಸಂಕಲ್ಪ ಮಾಡಬೇಕು. ಕೆಡುಕುಗಳ ಸಮೀಪಕ್ಕೆ ಹೋಗುವುದಿಲ್ಲ ಎಂದು ಪ್ರತಿಜ್ಞೆ ಮಾಡಿಕೊಂಡು ಅಷ್ಟಕ್ಕೆ ಸಾಕು ಮಾಡಬಾರದು. ಬದಲಾಗಿ ಉತ್ತಮ ಸ್ವಭಾವಗಳು ಮತ್ತು ಪರಿಶುದ್ಧ ಕೃತ್ಯಗಳು ಅವುಗಳ ಜಾಗವನ್ನು ಪಡೆಯಬೇಕು. ಒಟ್ಟಿನಲ್ಲಿ ಇದಾಗಿದೆ ನಿಜವಾದ ತೌಬ ಮತ್ತು ಯಥಾರ್ಥ ಲಜ್ಜೆ. ಈ ಸ್ಥಿತಿಯನ್ನು ಪಡೆದರೆ ಅಂತಹ ದಾಸರನ್ನು ಅಲ್ಲಾಹನು ಪ್ರೀತಿಸುತ್ತಾನೆ. ಇಸ್ತಿಗ್‌ಫಾರ್ ಮತ್ತು ತೌಬದ ಕಡೆಗೆ ಹಝ್ರತ್ ಮಸೀಹ್ ಮೌಊದ್[ಅ] ಪದೇ ಪದೇ ನಮ್ಮ ಗಮನವನ್ನು ಸೆಳೆದಿರುವರು. ಅವರಿಗೆ ಇದರ ಬಗ್ಗೆ ಎಷ್ಟು ಚಿಂತೆ ಇತ್ತು ಎಂದರೆ, ಇದರ ಕುರಿತು ಜಮಾಅತಿನ ಗಮನ ಸೆಳೆಯದ ಯಾವುದೇ ಸಂದರ್ಭ ಇದ್ದಿರಲಿಲ್ಲ. ಆದ್ದರಿಂದ ಬೈಅತ್ತಿನ ಹಕ್ಕುಗಳನ್ನು ಈಡೇರಿಸುವವರಾಗಲು ನಾವು ಅಲ್ಲಾಹನ ಮತ್ತು ಅವನ ಪ್ರವಾದಿಯ ಆದೇಶಗಳು ಹಾಗೂ ನಿರ್ದೇಶನಗಳ ಬೆಳಕಿನಲ್ಲಿ ಹಝ್ರತ್ ಮಸೀಹ್ ಮೌಊದ್[ಅ] ನೀಡಿರುವ ನಿರ್ದೇಶನಗಳನ್ನು ಸದಾ ನಮ್ಮ ಮುಂದಿರಿಸಿಕೊಂಡು ಅವುಗಳನ್ನು ಪಾಲಿಸಲು ಪ್ರಯತ್ನಿಸುವುದು ಬಹಳ ಅಗತ್ಯ.

ನಾವು ನಮ್ಮೊಳಗೆ ಪರಿಶುದ್ಧವಾದ ಬದಲಾವಣೆಯನ್ನು ಉಂಟುಮಾಡದಿದ್ದರೆ, ನಿಜವಾದ ತೌಬ ಮತ್ತು ಇಸ್ತಿಗ್‌ಫಾರ್ ಕಡೆಗೆ ಗಮನ ನೀಡದಿದ್ದರೆ ಸುಧಾರಣೆ ಮಾಡುವುದಾಗಿ ನಾವು ಪ್ರತಿಜ್ಞೆ ಮಾಡುವುದರಿಂದ ಯಾವುದೇ ಪ್ರಯೋಜನ ಲಭಿಸದು. ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಮನುಷ್ಯನು ಸಹಜವಾಗಿಯೇ ಬಹಳ ದುರ್ಬಲನು ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿಯಾಗಿದೆ ಮತ್ತು ಅಲ್ಲಾಹನ ನೂರಾರು ಆಜ್ಞೆಗಳ ಭಾರ ಮನುಷ್ಯನ ಮೇಲೆ ಇದೆ. ಆದ್ದರಿಂದ ತನ್ನ ದೌರ್ಬಲ್ಯದ ಕಾರಣದಿಂದ ಕೆಲವು ಆಜ್ಞೆಗಳನ್ನು ಮನುಷ್ಯನು ಈಡೇರಿಸದೇ ಇರುವುದು ಅವನ ಸಹಜ ಗುಣವಾಗಿದೆ. ಹಾಗೆ ಕೆಲವೊಮ್ಮೆ ಕೆಡುಕಿನ ಕಡೆಗೆ ಸೆಳೆಯುವ ಆತ್ಮದ (ನಫ್ಸೆ ಅಮ್ಮಾರದ) ಕೆಲವು ಆಸೆಗಳು ಮನುಷ್ಯನ ಮೇಲೆ ಮೇಲುಗೈ ಸಾಧಿಸುತ್ತವೆ. ಆದ್ದರಿಂದ ತನ್ನ ದೌರ್ಬಲ್ಯ ಮತ್ತು ಸಹಜಗುಣದ ಕಾರಣದಿಂದ ಎಡವಿ ಬೀಳುವಾಗ ಅಲ್ಲಾಹನ ಕೃಪೆಯು ಆತನನ್ನು ನಾಶದಿಂದ ರಕ್ಷಿಸುವಂತೆ ಮಾಡಲು ತೌಬ ಮತ್ತು ಇಸ್ತಿಗ್‌ಫಾರ್ ಮಾಡುವ ಹಕ್ಕು ಆತನಿಗೆ ಇದೆ. ಅಲ್ಲಾಹನು ತೌಬ ಸ್ವೀಕಾರ ಮಾಡುವವನಲ್ಲ ಎಂದಾಗಿದ್ದರೆ ಮನುಷ್ಯನ ಮೇಲೆ ನೂರಾರು ಆಜ್ಞೆಗಳ ಭಾರವನ್ನು ಖಂಡಿತವಾಗಿಯೂ ಇರಿಸುತ್ತಿರಲಿಲ್ಲ ಎಂಬುದು ಖಚಿತವಾದ ಸಂಗತಿಯಾಗಿದೆ.

ಇದರಿಂದ ಅಲ್ಲಾಹನು **ತವ್ವಾಬ್** ಮತ್ತು **ಗ಼ಫೂರ್** ಆಗಿರುವನು ಎಂದು ನಿಸ್ಸಂಶಯವಾಗಿಯೂ ಸಾಬೀತಾಗುತ್ತದೆ. ಬೆಂಕಿಗೆ ಹಾಕಲ್ಪಟ್ಟರು ಕೂಡ ಇನ್ನು ಮುಂದೆ ಆ ಪಾಪವನ್ನು ಖಂಡಿತವಾಗಿಯೂ ಮಾಡಲಾರೆನು ಎಂಬ ದೃಢಸಂಕಲ್ಪದೊಂದಿಗೆ ಒಂದು ಪಾಪವನ್ನು ಬಿಡುವುದಾಗಿದೆ ತೌಬದ ಅರ್ಥ. ಇದಾಗಿದೆ ಶರತ್ತು. ಇಂತಹ ತೌಬವನ್ನು ಮಾಡಬೇಕು. ಒಟ್ಟಿನಲ್ಲಿ ಮನುಷ್ಯನು ಈ ಸತ್ಯನಿಷ್ಠೆ ಮತ್ತು ದೃಢಸಂಕಲ್ಪದೊಂದಿಗೆ ಅಲ್ಲಾಹನ ಕಡೆಗೆ

ಮರಳುವಾಗ ದಯಾವಂತನೂ ಕಾರುಣ್ಯವಂತನೂ ಆದ ಅಲ್ಲಾಹನು ಆತನ ಪಾಪದ ಶಿಕ್ಷೆಯನ್ನು ಕ್ಷಮಿಸುತ್ತಾನೆ. ತೌಬವನ್ನು ಸ್ವೀಕಾರ ಮಾಡಿಕೊಂಡು ನಾಶದಿಂದ ರಕ್ಷಿಸುವುದು ಅಲ್ಲಾಹನ ಉನ್ನತ ಗುಣಗಳಲ್ಲಿ ಒಂದಾಗಿದೆ.

ನಾವು ಬಹಳಷ್ಟು ಇಸ್ತಿಗ್‌ಫಾರ್ ಮಾಡಿದೆವು, ನೂರು ಅಥವಾ ಸಾವಿರ ಬಾರಿ ತಸ್ಬೀಹ್ ಹೇಳಿದೆವು ಎಂದು ಅನೇಕ ಜನರು ಹೇಳುತ್ತಾರೆ. ಆದರೆ ಅವರೊಡನೆ ಇಸ್ತಿಗ್‌ಫಾರಿನ ಅರ್ಥವನ್ನು ಕೇಳಿದರೆ ತಬ್ಬಿಬ್ಬಾಗುತ್ತಾರೆ. ಮನುಷ್ಯನಿಂದ ಉಂಟಾದ ಪಾಪಗಳ ಮತ್ತು ಅಪರಾಧಗಳ ಶಿಕ್ಷೆ ಅನುಭವಿಸಬೇಕಾಗಿ ಬರದಿರಲು ಮತ್ತು ಅದು ಕ್ಷಮಿಸಲ್ಪಡುವಂತೆ ಆಗಲು ಮನುಷ್ಯನು ನೈಜವಾಗಿಯೂ ಮನಸ್ಸಿನಲ್ಲಿ ಕ್ಷಮೆಯನ್ನು ಯಾಚಿಸಬೇಕು. ಇನ್ನು ಮುಂದೆ ಸತ್ಕರ್ಮಗಳನ್ನು ಮಾಡಲು ಸೌಭಾಗ್ಯ ಲಭಿಸುವಂತೆ ಮತ್ತು ಪಾಪಗಳಿಂದ ರಕ್ಷಣೆ ಪಡೆಯಲಿಕ್ಕಾಗಿ ಮನುಷ್ಯನು ಸದಾ ಅಲ್ಲಾಹನ ಸಹಾಯವನ್ನು ಯಾಚಿಸುತ್ತಾ ಇರಬೇಕು.

ಬಾಯಿಮಾತಿನಿಂದ ಏನೂ ನಡೆಯದು. ಹಿಂದೆ ಮಾಡಿದ ಪಾಪಗಳನ್ನು ಅಲ್ಲಾಹನು ಕ್ಷಮಿಸಿ ಕೊಡಲಿಕ್ಕಾಗಿ ಮತ್ತು ಇನ್ನು ಮುಂದೆ ಪಾಪಗಳಿಂದ ರಕ್ಷಿಸಲಿಕ್ಕಾಗಿ ಹಾಗೂ ಒಳಿತು ಮಾಡಲು ಸೌಭಾಗ್ಯ ಲಭಿಸಲಿಕ್ಕಾಗಿ ಸ್ವಂತ ಭಾಷೆಯಲ್ಲೂ ಕ್ಷಮೆಯಾಚನೆ ಮಾಡಬಹುದಾಗಿದೆ. ಇದೇ ಯಥಾರ್ಥ ಇಸ್ತಿಗ್‌ಫಾರ್ ಆಗಿದೆ. ಹೃದಯದಿಂದ ಹೊರಡುವ ಮಾತೇ ಅಲ್ಲಾಹನಿಗೆ ತಲುಪುತ್ತದೆ. ನಾಲಗೆ ಹೃದಯದ ಸ್ಥಿತಿಗೆ ಕೇವಲ ಸಾಕ್ಷ್ಯವನ್ನು ನುಡಿಯುತ್ತದೆ ಅಷ್ಟೇ. ಕೇವಲ ಬಾಯಿಮಾತಿನ ದುಆಗಳು ವ್ಯರ್ಥ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಯಾವುದಾದರೂ ವಿಶಿಷ್ಟವಾದ ಸಂಗತಿಯನ್ನು ನಮ್ಮ ಜಮಾಅತಿನವರು ತೋರಿಸಬೇಕು. ಒಬ್ಬ ವ್ಯಕ್ತಿ ಬೈಅತ್ ಮಾಡಿಕೊಂಡು ಯಾವುದೇ ವಿಶಿಷ್ಟ ಸಂಗತಿ ಆತನಲ್ಲಿ ಉಂಟಾಗದಿದ್ದರೆ, ಪತ್ನಿ ಮಕ್ಕಳೊಂದಿಗೆ ಹಿಂದೆ ವರ್ತಿಸುತ್ತಿದ್ದ ಹಾಗೆಯೇ ಈಗಲೂ ವರ್ತಿಸುತ್ತಿರುವನಾದರೆ, ಅದು ಒಳ್ಳೆಯ ವಿಷಯವಲ್ಲ. ಬೈಅತ್ ಮಾಡಿಕೊಂಡ ನಂತರವೂ ಅದೇ ಕೆಟ್ಟ ಸ್ವಭಾವ ಮತ್ತು ಕೆಟ್ಟ ವರ್ತನೆ ಬಾಕಿ ಇರುವುದಾದರೆ ಹಾಗೂ ಹಿಂದಿನ ಅದೇ ಸ್ಥಿತಿ ಇರುವುದಾದರೆ ಬೈಅತ್ ಮಾಡುವುದರ ಪ್ರಯೋಜನ ವೇನು? ಬೈಅತ್ ಮಾಡಿದ ನಂತರ ಅನ್ಯರಿಗೂ ಮತ್ತು ಸ್ವಂತ ಸಂಬಂಧಿಕರಿಗೂ ಎಂತಹ ಮಾದರಿಯನ್ನು ತೋರಿಸಬೇಕು ಎಂದರೆ, ಈತ ಹಿಂದೆ ಇದ್ದ ಹಾಗೆ ಈಗ ಇಲ್ಲವೆಂದು ಅವರು ಹೇಳುವಂತಾಗಬೇಕು. ಇದೇ ಯಥಾರ್ಥ ಇಸ್ತಿಗ್‌ಫಾರಿನ ಪರಿಣಾಮವಾಗಿರಬೇಕು. ಕೆಲವು ಅಜ್ಞಾನಿಗಳಾದ ಪಾದರಿಗಳು ಹಝ್ರತ್ ಪೈಗಂಬರ್(ಸ)ರ ಇಸ್ತಿಗ್‌ಫಾರಿನ ಕುರಿತು ಆಕ್ಷೇಪವೆತ್ತಿರುವರು. ಹಝ್ರತ್ ಪೈಗಂಬರ್(ಸ) ಪಾಪಿಯಾಗಿರುವರು ಎಂಬುದು ಅವರ ಇಸ್ತಿಗ್‌ಫಾರ್ ಮಾಡುವಿಕೆಯಿಂದ ಸಾಬೀತಾಗುತ್ತದೆ ಎಂದು ಅವರು ಬರೆದಿರುವರು. ಇಸ್ತಿಗ್‌ಫಾರ್ ಎಂಬುದು ಒಂದು ಉತ್ತಮ ಗುಣವಾಗಿದೆ ಎಂದು ಈ ಮೂಢರಿಗೆ ಗೊತ್ತಿಲ್ಲ. ದೌರ್ಬಲ್ಯ ಮತ್ತು ಬಲಹೀನತೆ ಮನುಷ್ಯನ ಸಹಜಗುಣ ಎಂಬ ರೀತಿಯಲ್ಲಿ ಮನುಷ್ಯನನ್ನು ಸೃಷ್ಟಿಸಲಾಗಿದೆ.

ಪ್ರವಾದಿಗಳು ಈ ಪ್ರಕೃತಿ ಸಹಜವಾದ ದೌರ್ಬಲ್ಯ ಮತ್ತು ಮಾನುಷಿಕ ಬಲಹೀನತೆಯನ್ನು ಚೆನ್ನಾಗಿ ಬಲ್ಲರು. ಆದುದರಿಂದ ಅವರು ಹೀಗೆ ದುಆ ಮಾಡುತ್ತಾರೆ: ಹೇ ಪ್ರಭೂ, ಆ ಮಾನುಷಿಕ ದೌರ್ಬಲ್ಯಗಳು ಉಂಟಾಗದ ರೀತಿಯಲ್ಲಿ ನಮ್ಮ ಸಂರಕ್ಷಣೆ ಮಾಡು.

ತನ್ನ ಸ್ವಂತ ಸಾಮರ್ಥ್ಯದಿಂದ ಪಾಪಗಳಿಂದ ರಕ್ಷಣೆ ಪಡೆಯಬಹುದು ಎಂದು ಯಾರಿಗೂ ವಾದಿಸಲು ಸಾಧ್ಯವಲ್ಲ. ಆದ್ದರಿಂದ ಸಂರಕ್ಷಣೆಗಾಗಿ ಪ್ರವಾದಿಗಳೂ ಅಲ್ಲಾಹನನ್ನು ಅವಲಂಬಿಸುತ್ತಾರೆ. ಒಟ್ಟಿನಲ್ಲಿ ದೇವನ ಆರಾಧಕ ಎಂಬುದನ್ನು ವ್ಯಕ್ತಪಡಿಸಲಿಕ್ಕಾಗಿ ಹಝ್ರತ್ ಪೈಗಂಬರ್(ಸ) ಕೂಡ ಸ್ವಂತ ಸಂರಕ್ಷಣೆಗಾಗಿ ಇತರ ಪ್ರವಾದಿಗಳ ಹಾಗೆ ಅಲ್ಲಾಹನೊಡನೆ ಯಾಚಿಸುತ್ತಿದ್ದರು. ಹಝ್ರತ್ ಈಸಾ ಮಸೀಹ್(ಅ) ಕ್ಷಮೆ ಯಾಚನೆ ಮಾಡುತ್ತಿರಲಿಲ್ಲ ಎಂಬುದು ಕ್ರೈಸ್ತರ ತಪ್ಪುಗ್ರಹಿಕೆಯಾಗಿದೆ. ಈಸಾ ಮಸೀಹರು ಅನೇಕ ಬಾರಿ ತಮ್ಮ ಬಲಹೀನತೆಯನ್ನು ಒಪ್ಪಿಕೊಂಡಿದ್ದರು ಮತ್ತು ಇಸ್ತಿಗ್‌ಫಾರ್ ಕೂಡ ಮಾಡುತ್ತಿದ್ದರು ಎಂದು ಇಂಜೀಲಿನಿಂದ ಸ್ಪಷ್ಟವಾಗಿ ತಿಳಿದುಬರುತ್ತದೆ. **ಏಲಿ ಏಲಿ ಲಮಾ ಸಬಖ್ತಾನಿ** ಎಂಬುದರ ಅರ್ಥವೇನೆಂದು ಅವರು ಹೇಳಲಿ. ಈಸಾ(ಅ) **ಅಬೀ ಅಬೀ** ಎಂದು ಏಕೆ ಕರೆಯಲಿಲ್ಲ. ಹೀಬ್ರೂ ಭಾಷೆಯಲ್ಲಿ ಏಲ್ ಎಂಬುದರ ಅರ್ಥ ದೇವನು ಎಂದಾಗಿದೆ. ಅದರ ತಾತ್ಪರ್ಯವೇನೆಂದರೆ, ಕರುಣೆದೋರು ಮತ್ತು ಕೃಪೆದೋರು ಹಾಗೂ ಯಾವುದೇ ಸಹಾಯ ಲಭಿಸದ ರೀತಿಯಲ್ಲಿ ನನ್ನನ್ನು ಬಿಟ್ಟು ಬಿಡಬೇಡ. ಎಂದರೆ ನನ್ನ ಸಂರಕ್ಷಣೆ ಮಾಡು ಎಂದಾಗಿದೆ.

ಹದೀಸಿನಲ್ಲಿ ಹೀಗೆ ಬಂದಿದೆ: ಮನುಷ್ಯನು ದೇವನ ಕಡೆಗೆ ಒಂದು ಮೊಳ ಸಾಗಿದರೆ ದೇವನು ಆತನ ಕಡೆಗೆ ಒಂದು ಮಾರಿನಷ್ಟು ಬರುತ್ತಾನೆ. ಮನುಷ್ಯನು ನಡೆದುಕೊಂಡು ಹೋದರೆ ದೇವನು ಆತನ ಕಡೆಗೆ ಓಡುತ್ತಾ ಬರುತ್ತಾನೆ. ಎಂದರೆ ಮನುಷ್ಯನು ಅಲ್ಲಾಹನ ಕಡೆಗೆ ಗಮನ ನೀಡಿದರೆ ಅಲ್ಲಾಹನು ಕೂಡ ಕಾರುಣ್ಯ, ಕೃಪೆ ಮತ್ತು ಮಗ್‌ಫಿರತ್ ತೋರಿಸುತ್ತಾ ಅಪರಿಮಿತವಾದ ಅನುಗ್ರಹ ಸುರಿಸುತ್ತಾನೆ. ಆದರೆ ದೇವನಿಂದ ಮುಖ ತಿರುಗಿಸಿದರೆ ದೇವನಿಗೆ ಅದರ ಯಾವುದೇ ಪರಿವೆ ಇರುವುದಿಲ್ಲ. ಪವಿತ್ರ ಖುರ್‌ಆನ್ ದೇವನ ಎರಡು ಹೆಸರುಗಳನ್ನು ಮುಂದಿರಿಸಿದೆ. **ಅಲ್‌ಹಯ್ಯ್** ಮತ್ತು **ಅಲ್‌ಖಯ್ಯೂಮ್**. **ಅಲ್‌ಹಯ್ಯ್** ಎಂಬುದರ ಅರ್ಥ ದೇವನು ಜೀವಂತನೂ ಮತ್ತು ಇತರರಿಗೆ ಜೀವವನ್ನು ದಯಪಾಲಿಸುವವನೂ ಆಗಿರುವನು ಎಂದಾಗಿದೆ. **ಅಲ್‌ಖಯ್ಯೂಮ್** ಎಂಬುದರ ಅರ್ಥ ಸ್ವತಃ ನೆಲೆನಿಂತಿರುವವನೂ ಮತ್ತು ಇತರರ ನೆಲೆನಿಲ್ಲುವಿಕೆಗೆ ಯಥಾರ್ಥ ಕಾರಣಕರ್ತನೂ ಆಗಿರುವನು ಎಂದಾಗಿದೆ. ಪ್ರತಿಯೊಂದು ವಸ್ತುವಿನ ಬಾಹ್ಯ ಮತ್ತು ಆಂತರಿಕ ನೆಲೆನಿಲ್ಲುವಿಕೆ ಹಾಗೂ ಜೀವ ಈ ಎರಡು ಗುಣಗಳ ಮೂಲಕವೇ ಆಗಿದೆ. ಒಟ್ಟಿನಲ್ಲಿ ಅಲ್ಲಾಹನನ್ನು ಆರಾಧಿಸಬೇಕು ಎಂಬುದನ್ನು **ಹಯ್ಯ್** ಎಂಬ ಪದ ಆವಶ್ಯಪಡುತ್ತದೆ. ಅದರ ಪ್ರಕಟಣೆ ಸೂರ ಫಾತಿಹದ **ಇಯ್ಯಾಕ ನಅ್‌ಬುದು** ಆಗಿದೆ. (ಅರ್ಥ: ನಿನ್ನನ್ನು ಮಾತ್ರ ನಾವು ಆರಾಧಿಸುತ್ತೇವೆ.) ಅಲ್ಲಾಹನಿಂದ ನೆರವು ಯಾಚಿಸಬೇಕು ಎಂಬುದನ್ನು **ಅಲ್‌ಖಯ್ಯೂಮ್** ಎಂಬ ಪದ ಆವಶ್ಯಪಡುತ್ತದೆ. ಅದನ್ನು **ಇಯ್ಯಾಕ ನಸ್‌ತಈನ್** (ನಿನ್ನಿಂದ ಮಾತ್ರ ಸಹಾಯವನ್ನು ಯಾಚಿಸುತ್ತೇವೆ.) ಎಂಬ ವಾಕ್ಯದ ಮೂಲಕ ಸೂಚಿಸಲಾಗಿದೆ. ಪ್ರತಿಯೊಂದು ಅವಸ್ಥೆಯಲ್ಲೂ ಮನುಷ್ಯನಿಗೆ ದೇವನ ಆವಶ್ಯಕತೆ ಬರುತ್ತದೆ. ಆದ್ದರಿಂದ ದೇವನಿಂದ ಸಹಾಯವನ್ನು ಯಾಚಿಸುವುದು ಅಗತ್ಯ. ಇದೇ ಯಥಾರ್ಥ **ಇಸ್ತಿಗ್‌ಫಾರ್** ಆಗಿದೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಸತ್ಕರ್ಮಗಳಲ್ಲಿ ಮತ್ತು ಆರಾಧನೆಯಲ್ಲಿ ಆಸಕ್ತಿ ಮತ್ತು ಉತ್ಸಾಹ ಸ್ವಂತ ಪ್ರಯತ್ನದಿಂದ ಸಾಧ್ಯವಲ್ಲ. ಇದು ಅಲ್ಲಾಹನ ಕೃಪೆ ಮತ್ತು

ಔದಾರ್ಯದಿಂದ ಲಭಿಸುತ್ತದೆ. ಆದ್ದರಿಂದ ಮನುಷ್ಯನು ಗಾಬರಿಪಡಬಾರದು. ಅಲ್ಲಾಹನಿಂದ ಸೌಭಾಗ್ಯ ಮತ್ತು ಕೃಪೆ ಲಭಿಸಲಿಕ್ಕಾಗಿ ದುಆಗಳನ್ನು ಮಾಡುತ್ತಿರಬೇಕು. ಆರಾಧನೆಯಲ್ಲಿ ಆಸಕ್ತಿ ಮತ್ತು ಉತ್ಸಾಹ ಲಭಿಸಲು ಅಲ್ಲಾಹನಲ್ಲಿ ಯಾಚಿಸಬೇಕು ಮತ್ತು ಈ ರೀತಿಯಾಗಿ ದುಆ ಮಾಡುವುದರಲ್ಲಿ ಆಯಾಸಗೊಳ್ಳಬಾರದು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಚೆನ್ನಾಗಿ ನೆನಪಿಡಿರಿ, ಅಲ್ಲಾಹನನ್ನು ಬಿಟ್ಟುಕೊಂಡು ಚಿಕಿತ್ಸೆ ಮತ್ತು ಯೋಜನೆಗಳ ಮೇಲೆ ಭರವಸೆ ಇರಿಸುವುದು ಮೂರ್ಖತನವಾಗಿದೆ. ತನ್ನ ಜೀವಿತದಲ್ಲಿ ಎಂತಹ ಬದಲಾವಣೆ ಉಂಟುಮಾಡಬೇಕು ಎಂದರೆ, ಹೊಸ ಜೀವಿತ ಇಸ್ತಿಗ್‌ಫಾರಿನ ಜೀವಿತವೆಂದು ತೋರುವ ರೀತಿಯಲ್ಲಿ ಆಗಿರಬೇಕು. ಹೆಚ್ಚು ಹೆಚ್ಚಾಗಿ ಇಸ್ತಿಗ್‌ಫಾರ್ ಮಾಡಿರಿ. ಲೌಕಿಕವಾದ ಕೆಲಸಗಳ ಕಾರಣದಿಂದ ಬಿಡುವು ಸಿಗದ ಜನರು ಬಹಳ ಹೆಚ್ಚು ಹೆದರಬೇಕಾಗಿದೆ. ಅಲ್ಲಾಹನಿಗೆ ಸಲ್ಲಬೇಕಾದ ಕರ್ತವ್ಯಗಳು ಉದ್ಯೋಗಿ ಜನರಿಂದ ಹೆಚ್ಚಾಗಿ ಬಿಟ್ಟುಹೋಗುತ್ತವೆ. ಆದ್ದರಿಂದ ಯಾವುದೇ ನಿರ್ವಾಹವಿಲ್ಲದ ಅವಸ್ಥೆಯಲ್ಲಿ ಝುಹರ್–ಅಸ್ರ್ ಮತ್ತು ಮಗ್‌ರಿಬ್–ಇಶಾ ನಮಾಝುಗಳನ್ನು ಜಮಾ ಮಾಡಿಕೊಂಡು ಅನುಷ್ಠಿಸುವುದು ಅನುಮತನೀಯವಾಗಿದೆ. ಬಹಳ ನಿರ್ಬಂಧಿತ ಸ್ಥಿತಿಯಲ್ಲಿ ಜಮಾ ಮಾಡಿಕೊಂಡು ನಿರ್ವಹಿಸಿರಿ. ಆದರೆ ನಮಾಝುಗಳನ್ನು ಅವುಗಳ ನಿಶ್ಚಿತ ಸಮಯದಲ್ಲಿ ನಿರ್ವಹಿಸುವುದೇ ಸರಿಯಾದ ಕ್ರಮವಾಗಿದೆ. ಅಲ್ಲಾಹನಿಗೆ ಸಲ್ಲಬೇಕಾದ ಮತ್ತು ಸೃಷ್ಟಿಗಳಿಗೆ ಸಲ್ಲಬೇಕಾದ ಹಕ್ಕುಗಳಲ್ಲಿ ದೌರ್ಜನ್ಯ ಮತ್ತು ಅಕ್ರಮ ನಡೆಸಬೇಡಿರಿ. ತಮಗೆ ಒಪ್ಪಿಸಲಾದ ಕರ್ತವ್ಯಗಳನ್ನು ಪ್ರಾಮಾಣಿಕತೆಯಿಂದ ನಿರ್ವಹಿಸಿರಿ. ಒಟ್ಟಿನಲ್ಲಿ ಮೂಲಭೂತವಾದ ದೈವಿಕ ಆಜ್ಞೆಗಳನ್ನು ಮುಂದಿರಿಸಿಕೊಂಡು ಅವುಗಳನ್ನು ಸರಿಯಾಗಿ ಪಾಲಿಸುವಾಗಲೇ ಇಸ್ತಿಗ್‌ಫಾರ್ ಮತ್ತು ತೌಬ ಪ್ರಯೋಜನಕರವಾಗುವುದು. ನಮಾಝುಗಳನ್ನು ನಿಯತವಾಗಿ ನಿರ್ವಹಿಸಬೇಕು, ಅಲ್ಲಾಹನಿಗೆ ಸಲ್ಲಬೇಕಾದ ಮತ್ತು ಸೃಷ್ಟಿಗಳಿಗೆ ಸಲ್ಲಬೇಕಾದ ಹಕ್ಕುಗಳನ್ನು ಸರಿಯಾಗಿ ನಿರ್ವಹಿಸಬೇಕು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ತೌಬ ಸ್ವೀಕಾರವಾಗುವುದಿಲ್ಲವೆಂದು ಹೇಳಬೇಡಿರಿ. ನೆನಪಿಡಿರಿ, ನೀವು ಎಂದಿಗೂ ನಿಮ್ಮ ಸತ್ಕರ್ಮಗಳ ಕಾರಣದಿಂದ ಮಾತ್ರ ರಕ್ಷಣೆ ಪಡೆಯಲಾರಿರಿ. ಯಾವಾಗಲೂ ಅಲ್ಲಾಹನ ಕೃಪೆ ರಕ್ಷಿಸುತ್ತದೆ, ಸತ್ಕರ್ಮಗಳಲ್ಲ. ಹೇ ದಯಾಳು ಮತ್ತು ಕೃಪಾಳುವಾದ ಪ್ರಭೂ, ನಮ್ಮೆಲ್ಲರ ಮೇಲೆ ಕೃಪೆದೋರು. ನಾವು ನಿನ್ನ ದಾಸರು ಮತ್ತು ನಿನ್ನ ಸನ್ನಿಧಿಯಲ್ಲಿ ಬಿದ್ದಿರುವೆವು.

ಅಲ್ಲಾಹನು ನಮ್ಮನ್ನು ಹಝ್ರತ್ ಮಸೀಹ್ ಮೌಊದ್(ಅ)ರ ದುಆದ ವಾರಸುದಾರರನ್ನಾಗಿ ಮಾಡಲಿ. ನಾವು ತೌಬ ಮತ್ತು ಇಸ್ತಿಗ್‌ಫಾರಿನ ಯಥಾರ್ಥ ತಾತ್ಪರ್ಯವನ್ನು ಅರಿತುಕೊಂಡು ಇಸ್ತಿಗ್‌ಫಾರ್ ಮತ್ತು ತೌಬ ಮಾಡುವವರಾಗಲಿ.

ಖುತ್ಬದ ಕೊನೆಯಲ್ಲಿ ಹುಝೂರ್ ನಾಲ್ವರು ದಿವಂಗತರ ಕುರಿತು ಪ್ರಸ್ತಾಪಿಸಿ ಅವರು ಜಮಾಅತಿಗೆ ಮಾಡಿದ ಸೇವೆಗಳನ್ನು ವಿವರಿಸಿದರು ಹಾಗೂ ಜುಮಾ ನಮಾಝಿನ ನಂತರ ಅವರ ಜನಾಝ ಗ್ವಾಯಿಬ್ ನಿರ್ವಹಿಸುವುದಾಗಿ ಹೇಳಿದರು.

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّاٰتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَاءِ ذِي الْقُرْبٰى
وَيَنْهٰى عَنِ الْفَحْشَاءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis*** *(atba)*

*At,* ***'Masjid Mubarak',*** *Islamabad, Tilford, UK.* On 25-08-2023

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim |***Layout****:* U Basheer Ahmad

***Published By****:* Kannada Isha'at Team for Nazarath Nashr-O-Isha'ath, Qadian

***Email****: khutuba.kannada@gmail.com*

**You can find all the Sermons archived at**: www.alislam.org/friday-sermon